ಮುಂತಾದ ವಿವಿಧ ಕಾಮಗಾರಿಗಳಲ್ಲಿ ಅನೇಕ ಕೆಲಸಗಳು ಮುಕ್ತಾಯವಾಗಿವೆ. ಆ ಬಗ್ಗೆ ನನಗೆ ವಿವರವಾದ ಪಟ್ಟಿ ಬಂದಿದೆ. ಅದನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡುತ್ತೇನೆ. ಉಳಿದ ಕಾಮಗಾರಿಗಳ ಬಗ್ಗೆ ತಮ್ಮ ಜೊತೆ ಮಾತನಾಡಿ ಅವುಗಳನ್ನೂ ಕೂಡ ಮಾಡಿಕೊಡುತ್ತೇನೆ.

ಅಧ್ಯಕ್ಷರು:- ಅದು ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು; ಮಂತ್ರಿಗಳು ಅದನ್ನು ಮಾಡಿಕೊಡುತ್ತಾರೆ, ತೊಂದರೆ ಏನೂ ಇಲ್ಲ.

ವಿಷಯ:- ಕೊರಟಗೆರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ಕೊರತೆ.

2(255)

ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕೊರಟಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳು ಮತ್ತು ತರಗತಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರುಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಶಿಕ್ಷಕರುಗಳ ಕೊರತೆಯನ್ನು ತುಂಬಲು ಸರ್ಕಾರ ಕ್ರಮ ತೆಗೆದು ಕೊಳ್ಳುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ)

ಶಾಲೆಗಳ ವಿವರ	ಮಂಜೂರಾದ ಹುದ್ದೆಗಳು	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು	ಮಕ್ಕಳ ಸಂಖ್ಯೆ
ಸರ್ಕಾರಿ ಮಾದರಿ ಬಾಲಕರ ಪ್ರಾಥಮಿಕ ಶಾಲೆ	7	7	219
ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆ	12	11	207
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಟೆ	6	6	242
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈನ್	10	10	271

ಆ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಟೆ, ಹೊರತು ಪಡಿಸಿ ಉಳಿದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದಿಲ್ಲ. ಶಿಕ್ಷಕರ ಕೊರತೆ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಚೆನ್ನಿಗಪ್ಪ:- ನಮ್ಮ ಕೊರಟಗೆರೆ ತಾಲ್ಲೂಕಿನಲ್ಲಿ ಸರ್ಕಾರಿ ಹಿರಿಯ ಪಾಠಶಾಲೆ ಇದ್ದು ಮಕ್ಕಳು ಜಾಸ್ತಿ ಇದ್ದರೆ, ಶಿಕ್ಷಕರ ಕೊರತೆ ಜಾಸ್ತಿ ಇದೆ. ಈ ವರ್ಷದಿಂದ 7ನೇ ತರಗತಿಯನ್ನು ಪಬ್ಲಿಕ್ ಪರೀಕ್ಷೆ ಮಾಡಬೇಕೆಂದು ಮಾನ್ಯ ಸಚಿವರು ಆಜ್ಞೆ ಮಾಡಿದ್ದಾರೆ. ಆದರೆ ಅಲ್ಲಿ ಶಿಕ್ಷಕರು 2-3 ಜನ ಮಾತ್ರ ಇದ್ದಾರೆ. ನಮ್ಮಲ್ಲಿ 7 ತರಗತಿಗಳು ಇರತಕ್ಕ ಅನೇಕ ಸರ್ಕಾರಿ ಶಾಲೆಗಳು ಇವೆ. ತುಂಬಿಗೆನಹಳ್ಳಿ, ಚಿಲಗೊಂಡನಹಳ್ಳಿ, ಹೊನ್ನಾರಹಳ್ಳಿ, ಈ ಮೂರು ಶಾಲೆಗಳಲ್ಲಿ ಇಬ್ಬಿಬ್ಬರು ಉಪಾಧ್ಯಯರು ಇದ್ದಾರೆ. ದಯವಿಟ್ಟು ಮಾನ್ಯ ಸಚಿವರು ಈ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರನ್ನು ಕೊಟ್ಟು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡರು:- ಮಾನ್ಯ ಸದಸ್ಯರು ಕೊರಟಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮತ್ತು ತರಗತಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇಲ್ಲದೇ ಇರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಸರ್ಕಾರಿ ಮಾದರಿ ಬಾಲಕರ ಪ್ರಾಥಮಿಕ ಶಾಲೆಯಲ್ಲಿ 7 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು, ಆ 7 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಅಲ್ಲಿರತಕ್ಕ ಮಕ್ಕಳ ಸಂಖ್ಯೆ 219.

ರೇಷಿಯೋ ಬಗ್ಗೆ ವಿಚಾರ ಮಾಡಿದರೆ ಹಿಂದೆ 70-80 ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಿದ್ದರು. ಈಗ 35-40 ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರು ಇರತಕ್ಕದ್ದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರಿ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಇರತಕ್ಕ 12 ಶಿಕ್ಷಕರ ಹುದ್ದೆಗಳಲ್ಲಿ 11ನ್ನು ಭರ್ತಿ ಮಾಡಿದ್ದೇವೆ. ಇನ್ನೊಂದನ್ನು ಸದ್ಯದಲ್ಲಿ ಭರ್ತಿ ಮಾಡುತ್ತೇವೆ. ಅಲ್ಲಿರತಕ್ಕ ಮಕ್ಕಳ ಸಂಖ್ಯೆ 207 ಮಾತ್ರ. 207 ಮಂದಿ ವಿದ್ಯಾರ್ಥಿಗಳಿಗೆ 11 ಜನ ಶಿಕ್ಷಕರು ಇರತಕ್ಕದ್ದನ್ನು ಮಾನ್ಯ ಸ್ನೇಹಿತರು ತುಂಬಾ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಟೆ ಇಲ್ಲಿ 6 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು, 6ನ್ನು ಭರ್ತಿ ಮಾಡಿದ್ದೇವೆ. ಅಲ್ಲಿರತಕ್ಕ ಮಕ್ಕಳ ಸಂಖ್ಯೆ 242 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೈನ್; ಇಲ್ಲಿ 10 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು, 10ನ್ನು ಭರ್ತಿ ಮಾಡಿದ್ದೇವೆ. ಅಲ್ಲಿರತಕ್ಕ ಮಕ್ಕಳ ಸಂಖ್ಯೆ:71. ಈಗ ಇರತಕ್ಕ ಮಕ್ಕಳ ಮತ್ತು ಉಪಾಧ್ಯಾಯರ ಸಂಖ್ಯೆ: 50: 1, 40: 1 ಈ ರೀತಿ ಇದೆ.

ಅಧ್ಯಕ್ಷರು:- ಇನ್ನು ಎಲ್ಲಿ ಅಗತ್ಯವಿದೆ ಅಲ್ಲಿ ಮಾಡಿಕೊಡುತ್ತಾರೆ, ಕುಳಿತುಕೊಳ್ಳಿ, ಗೋವಿಂದೇಗೌಡರೇ, ನೀವು ಉತ್ತರಗಳನ್ನು ಕಳುಹಿಸಿ ಕೊಡುತ್ತೀರಲ್ಲಾ, ಆದರೆ ಸ್ಪೇಷನರಿ ಚೆನ್ನಾಗಿಲ್ಲ ಅಥವಾ ಬಹುಪ್ರತಿ ಯಂತ್ರ ಕೆಟ್ಟು ಹೋಗಿದೆಯೇನೋ ಗೊತ್ತಿಲ್ಲ. ದಯವಿಟ್ಟು ಸ್ವಲ್ಪ ಅಧಿಕಾರಿಗಳಿಗೆ ಹೇಳಿ.